

## ಯಂಡಮೂರಿ ವೀರೇಂದ್ರನಾಥ್

ಜನಪ್ರಿಯ ಕಾದಂಬರಿಗಳ ಮೂಲಕ ಓದುಗರ ಮೈಮನಗಳಲ್ಲಿ ಮಿಂಚು ಹರಿಸುವ ಹೆಸರು ಯಂಡಮೂರಿ ವೀರೇಂದ್ರನಾಥ್. ತೆಲುಗಿನವರಾದರೂ ಕನ್ನಡದ ಓದುಗ ವಲಯದಲ್ಲಿ ಇಲ್ಲಿನ ಕಾದಂಬರಿಗಾರರಿಗಿಂತ ಹೆಚ್ಚು ಜನಪ್ರಿಯತೆ ಪಡೆದವರು ಯಂಡಮೂರಿ. ಬಡತನ, ಸಾಹಸಪ್ರವೃತ್ತಿ, ಸಂಪತ್ತಿಗೆ ಸವಾಲ್ ಎಸೆಯುವಂತಹ ಬಂಡಾಯ, ಮಾಫಿಯಾ, ಸಾಮಾನ್ಯನೊಳಗಿನ ಅಸಾಮಾನ್ಯ ಶಕ್ತಿ, ನಮ್ಮ ಳತೆಯನ್ನು ಮೀರದ ಅತೀಂದ್ರಿಯ ಶಕ್ತಿ – ಹೀಗೆ ವಿಭಿನ್ನ ಸಂಗತಿಗಳ ಮೂಲಕ ಯುವತಲೆಮಾರಿಗೆ ಓದಿನ ಹುಚ್ಚು ಹತ್ತಿಸಿದ ಖ್ಯಾತಿ ಅವರದು. ಇತ್ತೀಚಿನ ವರ್ಷಗಳಲ್ಲಿ ಕಾದಂಬರಿ ಸನ್ಯಾಸ ತೊಟ್ಟಂತಿದ್ದ ಅವರು, ವ್ಯಕ್ತಿತ್ವ ವಿಕಸನ ಕುರಿತ ಕೃತಿಗಳನ್ನು ರಚಿಸಿದ್ದೇ ಹೆಚ್ಚು. 'ದಿಂಬಿನಡಿಯಲ್ಲೊಂದು ವಿಷಸರ್ಪ' ಕಾದಂಬರಿ ಮೂಲಕ ಯಂಡಮೂರಿ ಮತ್ತೆ 'ಸುಧಾ' ಓದುಗರ ಮುಂದೆ ಬರುತ್ತಿದ್ದಾರೆ.

## ಸಂಡೂರು ವೆಂಕಟೇಶ್



ರಾಯದುರ್ಗ ಮೂಲದ ಸಂಡೂರು ವೆಂಕಟೇಶ್ ಬೆಳೆದದ್ದು, ನೆಲೆ ಕಂಡುಕೊಂಡಿರುವುದು ಬೆಂಗಳೂರಿನಲ್ಲಿ. ಮೆಡಿಕಲ್ ರೆಪ್ರೆಸೆಂಟೇಟಿವ್ ಆಗಿ ವೃತ್ತಿಜೀವನ ಆರಂಭಿಸಿದ ಅವರು, ಸೇಲ್ಸ್ ಮ್ಯಾನೇಜರ್ ಆಗಿ ನಿವೃತ್ತರಾದವರು. ಅವರ ಹಾಸ್ಯಬರಹಗಳ 6 ಸಂಕಲನ ಹಾಗೂ 30 ಅನುವಾದಿತ ಕೃತಿಗಳು ಪ್ರಕಟವಾಗಿವೆ. ಕೆಲವು ಕೃತಿಗಳು ಧಾರಾವಾಹಿಗಳಾಗಿ ಪ್ರಕಟಗೊಂಡಿವೆ. ಈಗ ಯಂಡಮೂರಿಯವರ ಕಾದಂಬರಿಯ ಮೂಲಕ ವೆಂಕಟೇಶ್ 'ಸುಧಾ' ಬರಹಗಾರರ ಬಳಗಕ್ಕೆ ಸೇರ್ಪಡೆಯಾಗಿದ್ದಾರೆ.

ಟವರ್ಸ್‌ಗೆ ವಿಮಾನದಿಂದ 'ಡಿಕ್ಕಿ' ಹೊಡೆದ ಯುವಕರು ಸಾಯುವ ಹಿಂದಿನ ರಾತ್ರಿ ಚೆನ್ನಾಗಿ ಕುಡಿದು ವ್ಯಭಿಚಾರ ಮಾಡಿದ್ದರು.

ಅಷ್ಟೇ ಏಕೆ 'ಚಳುವಳಿ'ಗೆ ಹೊಸದಾಗಿ ಸೇರುವ ಯುವಕರಿಗೆ ನಾಯಕರು 'ಸ್ವರ್ಗ'ದ ಆಸೆ ತೋರಿಸಿ ಉಗ್ರವಾದಿಗಳನ್ನಾಗಿ ತಯಾರು ಮಾಡುತ್ತಾರೆ.. 'ಇತರೆ ಧರ್ಮದವರನ್ನು ಸಾಯಿಸಿ ಆತ್ಮಾಹುತಿ ಮಾಡಿಕೊಂಡರೆ, ಸ್ವರ್ಗದಲ್ಲಿ ನಿನಗೆ 72 ಮಂದಿ ಕನ್ಯೆಯರು ಸ್ವಾಗತ ಕೋರುತ್ತಾರೆ' ಎಂದು ನಂಬಿಸುತ್ತಾರೆ. ಇತ್ತೀಚೆಗೆ ಒಬ್ಬ ಯುವಕ ಸೊಂಟಕ್ಕೆ ಬಾಂಬ್ ಕಟ್ಟಿಕೊಂಡು ತನ್ನನ್ನು ತಾನೇ ಸ್ಫೋಟಿಸಿಕೊಂಡನು. ದೇಹವಿಡೀ ಛಿದ್ರವಾದರೂ ಸ್ವರ್ಗದಲ್ಲಿ ತನ್ನ ಗುಪ್ತಾಂಗವು ಸುರಕ್ಷಿತವಾಗಿ ಇರಬೇಕೆಂದು ಕಬ್ಬಿಣದ ಕಾಚಾ ಧರಿಸಿಕೊಂಡಿದ್ದನು! ಜನರಲ್ಲಿ ಎಂತೆಂಥಾ ಮೂರ್ಖರಿರುತ್ತಾರೆ ಎನ್ನವುದಕ್ಕೆ ಇದೊಂದು ಉದಾಹರಣೆ!

ಮೂರ್ಖತನಕ್ಕೆ ಇದಕ್ಕಿಂತ ದೊಡ್ಡ ಪರಾಕಾಷ್ಠೆ ನಮ್ಮ ಚರಿತ್ರೆಯಲ್ಲೇ ಇದೆ.... ಚೆಂಗೀಸ್‌ಖಾನ್ ಸತ್ತಾಗ ಸ್ವರ್ಗದಲ್ಲಿ ಅವನ ಸೇವೆ ಮಾಡುವುದಕ್ಕೆಂದು ಸಾವಿರದ ಆರುನೂರು ಕನ್ಯೆಯರನ್ನು ಬಲಿ ಕೊಟ್ಟಿದ್ದರು!

ಇಂತಹ ನಂಬಿಕೆಗಳಿಗೆ ಇರ್‍ರ್ಯಾಷನಲ್ ಬಿಲೀಫ್ ಅಂಡ್ ಪ್ಯಾನಿಕ್ ಡಿಸಾರ್ಡರ್ ಎನ್ನುತ್ತಾರೆ.

ಇಂತಹ ನಂಬಿಕೆಗಳು ಮಿಜ್ರಾಡಿನ್‌ನಲ್ಲೂ ಇದ್ದವು. ಆದರೆ ಅವನದು 'ಸೆಲಬ್ರಿಟಿ ವರ್ಷಿಪ್ ಸಿಂಡ್ರೋಮ್'. ಇಂತಹ ಮಾನಸಿಕ ವೈಪರೀತ್ಯ ಇರುವ ವ್ಯಕ್ತಿಗಳು ತಾವು ಅಭಿಮಾನಿಸುವ ನಟರು, ಆಟಗಾರರು, ಸ್ವಾಮಿಗಳು, ಪಾಪ್ ಸಿಂಗರ್ಸ್ ಮುಂತಾದವರನ್ನು ದೇವರಂತೆ ಆರಾಧಿಸುತ್ತಾರೆ.

ಕಟೌಟ್ಸ್ ನಿಲ್ಲಿಸಿ ತೆಂಗಿನಕಾಯಿ ಒಡೆಯುತ್ತಾರೆ. ಅವರು ಹೇಳುವುದೆಲ್ಲ ವೇದವೇ. ಎಷ್ಟೇ ತಪ್ಪು ಮಾಡಿದರೂ ಬೆಂಬಲಿಸುತ್ತಾರೆ. ತಿರುಗಿ ಬಿದ್ದರೆ ಉದ್ವೇಗದಿಂದ ಅಳುತ್ತಾರೆ. ಸ್ಪರ್ಶಿಸುವ ಸಲುವಾಗಿ ಮೇಲೆ ಬೀಳುತ್ತಾರೆ. ತರ್ಕಕ್ಕೆ ಎಟುಕದ ವ್ಯಕ್ತಿಪೂಜೆ ಇದು!

ಮಿಜ್ರಾಡಿನ್‌ಗೆ ಬಿನ್ ಲಾಡೆನ್ ಬಗ್ಗೆ ಇದ್ದದ್ದೂ ಅಂತಹ ಕುರುಡು ಆರಾಧನೆಯೇ!

ಹೇಗಾದರೂ ಮಾಡಿ ತನ್ನ ಮಗನನ್ನು ಬಿನ್ ಲಾಡೆನ್‌ಗೆ ವಾರಸ್ಥಾರನಾಗಿ ಮಾಡಬೇಕೆಂಬುದು ಅವನ ಬಯಕೆ. ಆದರೆ ಅವನಿಗೆ ಗಂಡು ಮಕ್ಕಳು ಇರಲಿಲ್ಲ, ಬಂಜೆಯಾದ ತನ್ನ ಮೊದಲ ಹೆಂಡತಿಗೆ ತಲಾಖ್ ಕೊಡಬೇಕು ಎಂದುಕೊಂಡನು. ಆದರೆ ಆವಳು ಅಫ್ಘನ್‌ಗೆ ಸೇರಿದ ಪ್ರಸ್ತೂನ್ ಜಾತಿ ಹುಡುಗಿ. ಆ ಜಾತಿಯಲ್ಲಿ ವಿಚ್ಛೇದನ ಅಷ್ಟು ಸುಲಭವಲ್ಲ. ಹಾಗಾಗಿ ಅವಳನ್ನು ಸಾಯಿಸಿ ಆಕಸ್ಮಿಕ ಸಾವೆಂದು ನಿರೂಪಿಸಿ ಎರಡನೆಯ ಮದುವೆ ಮಾಡಿಕೊಂಡನು. ಅವಳಿಗೆ ನಾಲ್ಕು ಮಂದಿ ಹೆಣ್ಣು ಮಕ್ಕಳು. ಅವಳನ್ನು ತೊರೆದು, ಮೂರನೆ ಹೆಂಡತಿ ನೂರ್‌ಜಹಾನ್‌ಳ ಮೂಲಕ ಗಂಡು ಮಗುವಿಗೆ ತಂದೆಯಾದನು. ಅವನಿಗೆ 'ಇಂಡಿಯಾಸ್ ಬಿನ್ ಲಾಡೆನ್' ಎಂದು ಹೆಸರಿಟ್ಟುಕೊಂಡನು. ಬಿನ್ ಲಾಡೆನ್‌ನ ಹಾಗೆ ಇಂಜಿನಿಯರ್ ಮಾಡುವುದು ಅವನ ಬಯಕೆ. ಕಾಲೇಜ್‌ನಲ್ಲಿ ಸಹ ವಿದ್ಯಾರ್ಥಿಗಳು ರೇಗಿಸುತ್ತಾರೆಂದು ಹೆಸರು ಬದಲಾಯಿಸಿ ಓದಿಸುತ್ತಿದ್ದಾನೆ. ಕಾಲೇಜ್‌ಗೆ ಸೇರಿದ ದಿನ ಮಗನ ಹೆಗಲ ಮೇಲೆ ಕೈಹಾಕಿ ಹೇಳಿದನು: 'ಬೇಟಾ... ನಮ್ಮ ಮತಕ್ಕೋಸ್ಕರವೇ ನಾನು ಬದುಕುತ್ತಿದ್ದೇನೆ. ಮುಂದೆ ನನ್ನ ವಾರಸ್ಥಾರನಾಗಿ ನೀನೇ ನಮ್ಮ ಮತವನ್ನು ಬೆಳೆಸಬೇಕು, ಬಿನ್ ಲಾಡೆನ್ ನಮ್ಮ ಆದರ್ಶ. ನಮ್ಮ ಮತವನ್ನು ಒಪ್ಪಿಕೊಳ್ಳದವರನ್ನು ಕೊಚ್ಚಿ ಹಾಕು. ವಿಧ್ವಂಸಕ ಕೃತ್ಯಗಳನ್ನು ಮಾಡು. ಏನು ಮಾಡಿದರೂ ಸರಿ, ಲಕ್ಷ ಮಂದಿಯನ್ನು ಸಾಯಿಸಿದರೂ ಸರಿ ನಮ್ಮ ಆಶಯವನ್ನು ಎತ್ತಿ ನಿಲ್ಲಿಸು, ನನ್ನ ನಂತರ ನೀನೇ ಈ ಯುದ್ಧವನ್ನು ಮಾಡಬೇಕು. ಜಿಹಾದ್... ಜಿಹಾದ್...

ಪವಿತ್ರ ಯುದ್ಧ....'

***

ಆ ಹುಡುಗಿಯ ಹಾಡು ಮುಗಿಯಿತು. ಸುತ್ತಲೂ ಇದ್ದ ಹುಡುಗಿಯರು ಚಪ್ಪಾಳೆ ತಟ್ಟಿದರು. ಅವರೆಲ್ಲ ಖರಗ್‌ಪುರ್‌ನಲ್ಲಿ ಐಐಟಿ ಓದುತ್ತಿರುವ ವಿದ್ಯಾರ್ಥಿನಿಯರೆಂದು ಮಾತುಗಳ ಸಂದರ್ಭದಲ್ಲಿ ತಿಳಿಯಿತು. ಅವನು ಆ ಹುಡುಗಿಯನ್ನೇ ನೋಡುತ್ತಿದ್ದನು.

ದುಂಡು ಮುಖ, ದೊಡ್ಡ ಕಣ್ಣುಗಳು, ಬ್ರೆಸ್ಟ್ ಮಾತ್ರ ಸಣ್ಣವು. ಸಣ್ಣ ಬ್ರೆಸ್ಟ್‌ನ ಹೆಣ್ಣುಗಳು ಬಹಳ ಬುದ್ಧಿವಂತರೂ, ಛಲಗಾತಿಯರೂ ಆಗಿರುತ್ತಾರೆಂದು ಎಲ್ಲಿಯೋ ಓದಿದ್ದನು.

ಟ್ರೇನ್ ಪೆದಪಲ್ಲಿಯಲ್ಲಿ ನಿಂತಿತು. ಮಿಜ್ರಾಡಿನ್ ಎದ್ದು ಬಾಗಿಲ ಬಳಿಗೆ ಹೋದನು. ಆಗ ತಾನೆ ಒಳಗೆ ಬಂದ ವ್ಯಕ್ತಿ 'ಜಿಹಾದ್ ಅಲ್ ಜಿಹಾದ್' ಎಂದು ತಗ್ಗಿದ ಸ್ವರದಲ್ಲಿ ಅಭಿನಂದಿಸಿದನು.

'ಜಿಹಾದ್ ಅಲ್ ಜಿಹಾದ್ ಮಹಮ್ಮದ್ ಹಲ್ವಾಫ್' ಎಂದನು ಮಿಜ್ರಾಡಿನ್. ಇಬ್ಬರೂ ಟಾಯ್ಲೆಟ್ ಬಳಿಯೇ ನಿಂತು ಮಾತನಾಡಿಕೊಂಡರು.

'ಇಲ್ಲಿ ಪರಿಸ್ಥಿತಿ ಭಯಂಕರವಾಗಿದೆ ಭಾಯ್' ಎಂದನು ಹಲ್ವಾಫ್. ನೋಡಲಿಕ್ಕೆ ಶಾಂತಿದೂತನಂತೆ ಕಾಣುವ ಅವನೊಬ್ಬ ಹಾರ್ಡ್‌ಕೋರ್ ಟೆರರಿಸ್ಟ್ ಎಂದರೆ ಯಾರೂ ನಂಬುತ್ತಿರಲಿಲ್ಲ.

'ಗೊತ್ತು' ಎಂದನು ಮಿಜ್ರಾಡಿನ್, 'ವೈಜಾಗ್‌ನಲ್ಲಿ ನಮ್ಮ ಮೂವರು ಜಿಹಾದಿಗಳನ್ನು ಸಾಯಿಸದರೆಂದು ನ್ಯೂಸ್ ಓದಿ ಇಲ್ಲಿಗೆ ಬಂದೆ. ನೆನ್ನೆ ಹಳೇ ಬಸ್ತಿಯಲ್ಲಿ ನಮ್ಮ ಕರ್ನಲ್‌ನ ರಹಸ್ಯವಾಗಿ ಅರೆಸ್ಟ್ ಮಾಡಿದ್ದಾರಂತೆ'.

'ಹೌದು ಲೆಫ್ಟಿನೆಂಟ್ ಸಾಹಬ್. ಈ ವಿಷಯ ಎಲ್ಲರಿಗೂ ಗೊತ್ತಿಲ್ಲ. ನಾನೇ ಮೇಜರ್‌ಸಾಬ್‌ಗೆ